(ಜಾಗೃತ ... ಲೆಕ್ಕ ತಪಾಸಣೆ
ದಿನಾಂಕ : 31/8/2020
ನಂ:......340......

ಕರ್ನಾಟಕ ಸರ್ಕಾರ

ಸಂಖ್ಯೆ: ಪಸಂಮೀ 114 ಪಪಾಯೋ 2015 (ಭಾ–1)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:24.08.2020.

## ಸುತ್ತೋಲೆ

29/08/2020
010287

ವಿಷಯ: ನಿವಾಸಿಕಲ್ಯಾಣ ಸಂಘ, ಅಪಾರ್ಟ್ಮೆಂಟ್ ಮಾಲೀಕರ ಸಂಘಗಳಿಗೆ ಸಾಕು ಪ್ರಾಣಿಗಳು ಹಾಗೂ ಬೀದಿ ನಾಯಿಗಳು / ಬೀಡಾಡಿ ಪ್ರಾಣಿಗಳ ರಕ್ಷಣೆಗಾಗಿ ಮಾರ್ಗಸೂಚಿಗಳು.

–0–

ರಾಜ್ಯದಲ್ಲಿ ಸಾವಿರಾರು ಸಾಕು ಪ್ರಾಣಿಗಳ ಮಾಲೀಕರಿದ್ದು, ಇತ್ತೀಚಿನ ದಿನಗಳಲ್ಲಿ ಪ್ರಾಣಿಗಳನ್ನು ಸಾಕುವವರ ಸಂಖ್ಯೆ ಮತ್ತು ಬೀದಿ ಬದಿಯ ನಾಯಿಗಳಿಗೆ ಊಟ ನೀಡುವವರ ಹಾಗೂ ಕಾಳಜಿವಹಿಸುವವರ ಸಂಖ್ಯೆ ಹೆಚ್ಚಾಗುತ್ತಿದ್ದು ಇದರಿಂದಾಗಿ ಪ್ರಾಣಿ ಪ್ರಿಯರು ಮತ್ತು ಅಪಾರ್ಟ್ಮೆಂಟ್ನ ವಾಸಿಗಳ ಮಧ್ಯೆ ಸಂಘರ್ಷವಾಗುವ ಸಾಧ್ಯತೆ ಹೆಚ್ಚುತ್ತಿದೆ.

ಇಂತಹ ಸಂಘರ್ಷವನ್ನು ಶಾಂತಿಯುತ ಮಾರ್ಗದಲ್ಲಿ ಪರಿಹರಿಸಲು ಸಾಕು ಪ್ರಾಣಿಗಳ ಮಾಲೀಕರು, ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ, ಅಪಾರ್ಟ್ಮೆಂಟ್ ಮಾಲೀಕರ ಸಂಘ(AOA) ಹಾಗೂ ನಿವಾಸಿ ಕಲ್ಯಾಣ ಸಂಘ (RWA) ಇವುಗಳಿಗೆ ಈ ಕೆಳಗಿನ ಮಾರ್ಗಸೂಚಿಗಳನ್ನು ನೀಡಲಾಗಿದೆ ಹಾಗೂ ಈ ಹಿಂದೆ ದಿನಾಂಕ 13.07.2020 ರಂದು ಹೊರಡಿಸಲಾಗಿರುವ ಸುತ್ತೋಲೆಯನ್ನು ಆಕ್ಷೇಪಗಳು ಸ್ವೀಕೃತವಾದ ಹಿನ್ನೆಲೆಯಲ್ಲಿ ಹಿಂಪಡೆಯಲಾಗಿದೆ.

ಕೇಂದ್ರ ಹಾಗೂ ರಾಜ್ಯದ ಕಾನೂನು, ಮಾನ್ಯ ಉಚ್ಚನ್ಯಾಯಾಲಯ ಹಾಗೂ ಸರ್ವೋಚ್ಚನ್ಯಾಯಾಲಯದ ತೀರ್ಪುಗಳು ಹಾಗೂ ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿ ಇವುಗಳ ನಿಯಮಾವಳಿಗಳಂತೆ ಈ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಎ) ದೆಹಲಿಯ ಮಾನ್ಯ ಉಚ್ಚನ್ಯಾಯಾಲಯವು, ಬೀದಿನಾಯಿಗಳಿಗೆ ಊಟ ನೀಡುವವರಿಗೆ 2010 ರಲ್ಲಿ ಮಾರ್ಗಸೂಚಿಗಳನ್ನು ನೀಡಿದ್ದು ಸದರಿ ಮಾರ್ಗಸೂಚಿಗಳನ್ನು ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿ, ನಿವಾಸಿ ಕಲ್ಯಾಣ ಸಂಘಗಳು, ಪಾಲಿಕೆ ಅಧಿಕಾರಿಗಳು, ಪ್ರಾಣಿ ಕಲ್ಯಾಣ ಸಂಘಗಳು ಹಾಗೂ ನಾಯಿಗಳಿಗೆ ಊಟ ನೀಡುವವರು ಜಾರಿಗೊಳಿಸಬೇಕಾಗುತ್ತದೆ.

Commissioner

ಬಿ) ದೆಹಲಿಯ ಮಾನ್ಯ ಉಚ್ಚನ್ಯಾಯಾಲಯವು 2017ರಲ್ಲಿ ಪ್ರಾಣಿಗಳಿಗೆ ಊಟ ನೀಡುವವರು ಇತರೆ ನಾಗರೀಕರಿಗೆ ಹಾಗೂ ನಿವಾಸಿಗಳಿಗೆ ಹಾಗೂ ನೆರೆಹೊರೆಯವರಿಗೆ ತೊಂದರೆಯಾಗದಂತೆ ಎಚ್ಚರವಹಿಸುವುದು ಎಂದು ತಿಳಿಸಿರುತ್ತದೆ.

ಸಿ) ಪ್ರಾಣಿಗಳ ಮೇಲಿನ ಕ್ರೌರ್ಯತಡೆ ಕಾಯ್ದೆ (1960), ಪ್ರಕಾರ ಕೇವಲ ಪ್ರಾಣಿಯ ಮಾಲೀಕನು ಮಾತ್ರವಲ್ಲದೆ ಪ್ರಾಣಿಗಳು ಯಾರ ಸುಪರ್ದಿನಲ್ಲಿ ಆಕ್ಷಣದಲ್ಲಿ ಇರುತ್ತದೋ ಅಂಥಹವರನ್ನೂ ಸಹಾ ಮಾಲೀಕ ಎಂದು ಪರಿಗಣಿಸಬೇಕು ಎಂದು ತಿಳಿಸಿದೆ.

ಡಿ) ಪಿಸಿಎ ಕಾಯ್ದೆಯ ಪ್ರಕಾರ ಯಾವ ವ್ಯಕ್ತಿಯ ಪಾಲನೆಯಲ್ಲಿ ಅಥವಾ ಸುಪರ್ದಿನಲ್ಲಿ ಯಾವುದೇ ಪ್ರಾಣಿಯು ಇರುತ್ತದೋ ಆ ಪ್ರಾಣಿಯ ಯೋಗಕ್ಷೇಮದ ಜವಾಬ್ದಾರಿ ಆವ್ಯಕ್ತಿಯದ್ದೇ ಆಗಿರುತ್ತದೆ.

**1. ಸಾಕುಪ್ರಾಣಿಗಳ ಮಾಲೀಕರಿಗೆ ಮಾರ್ಗಸೂಚಿಗಳು:-**

ಎ)ಸಾಕು ಪ್ರಾಣಿಗಳು ಮನೆಯ ಹೊರಗೆ ಅಥವಾ ಸಾರ್ವಜನಿಕ ಸ್ಥಳದಲ್ಲಿ ಇರುವಾಗ ಅವುಗಳಿಗೆ ಯಾವಾಗಲೂ ಬೆಲ್ಟ್ ಅಳವಡಿಸಿರತಕ್ಕದ್ದು.

ಬಿ) ಸಾರ್ವಜನಿಕ ಸ್ಥಳಗಳಲ್ಲಿ, ಪಾರ್ಕ್‌ಗಳಲ್ಲಿ, ಹುಲ್ಲು ಹಾಸಿನ ಮೇಲೆ ಅಥವಾ ನಿವಾಸಿಗಳ ಮನೆಯ ಹೊರಗೆ ಮಲವಿಸರ್ಜನೆ ಮಾಡಿದರೆ ಸಾಕುಪ್ರಾಣಿಗಳ ಮಾಲೀಕರೇ ಅದನ್ನು ಶುಚಿಗೊಳಿಸುವುದು.

**2. ನಿವಾಸಿಗಳ ಕಲ್ಯಾಣ ಸಂಘಗಳು(RWA) / ಅಪಾರ್ಟ್ಮೆಂಟ್ಸ್ ಮಾಲೀಕರ ಸಂಘಗಳಿಗೆ (AOA) ಮಾರ್ಗಸೂಚಿಗಳು:-**

1) RWAಗಳು / AOA ಗಳು ನಾಯಿಗಳನ್ನು ಸಾಕಲು ಕಾನೂನಾತ್ಮಕವಾಗಿ ಯಾವುದೇ ರೀತಿಯ ನಿಷೇಧ ಹೇರುವಂತಿಲ್ಲ.

2) RWAಗಳು / AOAಗಳು ತಮ್ಮ ನಿಯಮಗಳು, ಪರಿನಿಯಮಗಳನ್ನು ತಿದ್ದುಪಡಿಗೊಳಿಸಿಯೂ ಸಹಾಪ್ರಾಣಿಗಳನ್ನು ಸಾಕುವುದರ ಮೇಲೆ ನಿಷೇದ ಹೇರುವುದು ಕಾನೂನು ಬಾಹಿರವಾಗಿರುತ್ತದೆ. ಅಪಾರ್ಟ್ಮೆಂಟ್ ಅಸೋಸಿಯೇಷನ್‌ಗಳು ಸಂವಿಧಾನಿಕ ಚೌಕಟ್ಟಿನೊಳಗೆ ಸಾಕುಪ್ರಾಣಿಗಳ ಮಾಲೀಕತ್ವವನ್ನು ನಿಯಂತ್ರಿಸಲು ತಮ್ಮ ಉಪ ಕಾನೂನುಗಳನ್ನು ರೂಪಿಸಬಹುದು.

3) RWA ಗಳು / AOAಗಳು ಸಾಕು ಪ್ರಾಣಿಗಳನ್ನು ಲಿಫ್ಟ್‌ಗಳಲ್ಲಿ ಒಯ್ಯಲು ನಿರಾಕರಿಸುವಂತಿಲ್ಲ. ಮತ್ತು ಅವರಿಗೆ ಯಾವುದೇ ದಂಡ/ಶುಲ್ಕವನ್ನುವಿಧಿಸುವಂತಿಲ್ಲ.

4) ಪ್ರಾಣಿಗಳ ಮೇಲೆ ಕ್ರೌರ್ಯ, ಗಾಯಗೊಳಿಸುವುದು, ಹೊಡೆಯುವುದು, ಉಪವಾಸವಿಡುವುದು, ವಿಷಪ್ರಾಶನ ಮಾಡುವುದು, ಅಕ್ರಮವಾಗಿ ಗೂಡಿನಲ್ಲಿ ಕೂಡಿಡುವುದು, ಅಥವಾ ಕೊಲ್ಲುವುದು, ಪ್ರಾಣಿಗಳ ಮೇಲಿನ ಕ್ರೌರ್ಯವನ್ನು ತಡೆಗಟ್ಟುವ ಸೆಕ್ಷನ್ 11 ರ ಅಡಿಯಲ್ಲಿ ಮತ್ತು ಭಾರತೀಯ ದಂಡಸಂಹಿತೆಯ ಸೆಕ್ಷನ್ 428 ಮತ್ತು 429 ರ ಪ್ರಕಾರ ಕ್ರಿಮಿನಲ್ ಅಪರಾಧವಾಗಿದೆ.

5) ಸಾಧ್ಯವಾದರೆ ಸಾಕುಪ್ರಾಣಿಗಳು ಮಲವಿಸರ್ಜಿಸಲು, ಪ್ರತ್ಯೇಕಸ್ಥಳ ಒದಗಿಸುವುದು.

6) ಅಪಾರ್ಟ್‌ಮೆಂಟ್ / ಮನೆಯಿಂದ ಹೊರಗೆ ಸಾಕುಪ್ರಾಣಿಗಳಿಗೆ ಬೆಲ್ಟ್ ಅಳವಡಿಸದಿದ್ದಲ್ಲಿ ಮಾಲೀಕರಿಗೆ ದಂಡ ವಿಧಿಸುವುದು.

7) ಸಾಕು ನಾಯಿ ಅಥವಾ ಬೀದಿನಾಯಿಗಳು, ರಸ್ತೆಗಳನ್ನು ಬಳಸುವ ನಿವಾಸಿಗಳಿಗೆ/ ಸಾರ್ವಜನಿಕರಿಗೆ ಕಚ್ಚಿದರೆ / ಕಚ್ಚುತ್ತಿದ್ದರೆ ಪಾಲಿಕೆಯ ಆರೋಗ್ಯ ಇಲಾಖೆಗೆ ಮಾಹಿತಿ ನೀಡುವುದು.

8) ಆಹಾರ ನೀಡಲಾಗುತ್ತಿರುವ ನಾಯಿಗಳಿಗೆ ಸಂತಾನಹರಣ ಚಿಕಿತ್ಸೆಮಾಡಿಸಿರುವ ಹಾಗೂ ಲಸಿಕೆ ನೀಡಿರುವ ಬಗ್ಗೆ ದಾಖಲೆಗಳನ್ನು ನೋಡಬಯಸಿದಲ್ಲಿ ಅಧಿಕಾರಿಗಳಿಗೆ ಹಾಗೂ ನಿವಾಸಿಗಳಿಗೆ ಒದಗಿಸುವುದು.

3. <u>ಬೀದಿನಾಯಿಗಳಿಗೆ ಆಹಾರ ಒದಗಿಸುವವರಿಗೆ ಭಾರತೀಯ ಪ್ರಾಣಿಕಲ್ಯಾಣಮಂಡಳಿಯ ಮಾರ್ಗಸೂಚಿಗಳು:</u>

a) ಮಾನ್ಯ ನ್ಯಾಯಾಲಯವು ಬೀದಿಬದಿಯ ಪ್ರಾಣಿಗಳಿಗೆ ಆಹಾರ ಒದಗಿಸುವುದನ್ನು ಸಮಾಜಸೇವೆ ಎಂದು ಪರಿಗಣಿಸಿದೆ. ಅದರಂತೆ ಪ್ರಾಣಿಗಳಿಗೆ ಆಹಾರ ಒದಗಿಸುವವರಿಗೆ ಬೆದರಿಕೆ ಹಾಕುವುದು, ತೊಂದರೆ ನೀಡುವುದು ಕಾನೂನು ಬಾಹಿರವಾಗಿರುತ್ತದೆ.

b) ಹೆಚ್ಚಿನ ಸಂಖ್ಯೆಯಲ್ಲಿ ನಾಗರೀಕರು ಓಡಾಡದ ಸ್ಥಳಗಳಲ್ಲಿ ನಾಯಿಗಳಿಗೆ ಆಹಾರ ನೀಡುವುದು.

c) ನಾಯಿಗಳಿಗೆ ಒಂದೆಡೆ ಸೇರಿಸಿ ಆಹಾರ ನೀಡುವುದನ್ನು ತಪ್ಪಿಸುವುದು.

d) ಮನೆಗಳ ಪ್ರವೇಶಕ್ಕೆ/ ಸಾರ್ವಜನಿಕ ಪ್ರದೇಶಕ್ಕೆ ಹೊಂದಿಕೊಂಡಿರುವ ಸ್ಥಳಗಳಲ್ಲಿ ಆಹಾರ ನೀಡುವುದನ್ನು ತಪ್ಪಿಸುವುದು.

e) ಸಾರ್ವಜನಿಕ ದಟ್ಟಣೆ ಇಲ್ಲದ ಸಮಯದಲ್ಲಿ ಆಹಾರ ಒದಗಿಸುವುದು.

f) ಪ್ರಾಣಿಗಳಿಗೆ ಆಹಾರ ಒದಗಿಸುವಾಗ ನೈರ್ಮಲ್ಯಕಾಪಾಡುವುದು.

g) ಸಂತಾನಹರಣ ಚಿಕಿತ್ಸೆ ಹಾಗೂ ಲಸಿಕೆ ಹಾಕಿಸುವ ಸಂಬಂಧ RWAಗಳು ಸ್ಥಳೀಯ / ಗಳನ್ನು ಸಂಪರ್ಕಿಸುವುದು. ಶಸ್ತ್ರಚಿಕಿತ್ಸೆ ಮತ್ತು ಲಸಿಕೆ ಹಾಕಿಸಿದ ನಂತರ ಅದೇ ಪ್ರದೇಶಕ್ಕೆ ಹಿಂತಿರುಗಿಸುವುದು.

ಪ್ರಾಣಿ ಕಲ್ಯಾಣ ಮಂಡಳಿಯ ಅಭಿಪ್ರಾಯದಲ್ಲಿ ಈ ಎಲ್ಲಾ ಮಾರ್ಗಸೂಚಿಗಳನ್ನು ಸೂಕ್ಷ್ಮವಾಗಿ ಪಾಲಿಸಿದಲ್ಲಿ ಸಾರ್ವಜನಿಕರಿಗೆ ಹೆಚ್ಚುತೊಂದರೆಯಾಗದ ರೀತಿಯಲ್ಲಿ ಮೇಲ್ಕಂಡ ಉದ್ದೇಶಗಳನ್ನು, ಸಾಧಿಸಬಹುದಾಗಿದ

(ಆರ್. ಲೀಲಾವತಿ)

ಸರ್ಕಾರದ ವಿಶೇಷ ಕಾರ್ಯದರ್ಶಿ,

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

ಇವರಿಗೆ:

1. ಮಾನ್ಯ ಪಶುಸಂಗೋಪನಾ ಸಚಿವರ ಆಪ್ತಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನಕಾರ್ಯದರ್ಶಿ/ ಕಾರ್ಯದರ್ಶಿ (ಗೃಹಇಲಾಖೆ) ಇವರ ಆಪ್ತಕಾರ್ಯದರ್ಶಿ.
3. ಸರ್ಕಾರದ ಪ್ರಧಾನಕಾರ್ಯದರ್ಶಿ / ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಆಪ್ತಕಾರ್ಯದರ್ಶಿ,
4. ಸರ್ಕಾರದ ಪ್ರಧಾನಕಾರ್ಯದರ್ಶಿ / ಕಾರ್ಯದರ್ಶಿ, ಅರಣ್ಯ ಇಲಾಖೆ ಇವರ ಆಪ್ತಕಾರ್ಯದರ್ಶಿ.
5. ಸರ್ಕಾರದ ಪ್ರಧಾನಕಾರ್ಯದರ್ಶಿ / ಕಾರ್ಯದರ್ಶಿ, ಸಾರಿಗೆ ಇಲಾಖೆ ಇವರ ಆಪ್ತಕಾರ್ಯದರ್ಶಿ.
6. ಸರ್ಕಾರದ ಪ್ರಧಾನಕಾರ್ಯದರ್ಶಿ / ಕಾರ್ಯದರ್ಶಿ (ಪೌರಾಡಳಿತ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳು) ಇವರ ಆಪ್ತ ಕಾರ್ಯದರ್ಶಿ
7. ಸರ್ಕಾರದ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರ ಪತ್ರಾಂಕಿತ ಆಪ್ತಸಹಾಯಕರು.
8. ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
9. ಮುಖ್ಯ ವನ್ಯಜೀವಿ ವಾರ್ಡನ್, ಮಲ್ಲೇಶ್ವರಂ, ಅರಣ್ಯ ಭವನ, ಬೆಂಗಳೂರು.
10. ಡೀನ್, ಪಶುವೈದ್ಯಕೀಯ ವಿಜ್ಞಾನ ಕಾಲೇಜು, ಬೆಂಗಳೂರು.
11. ರಿಜಿಸ್ಟ್ರಾರ್, ಕರ್ನಾಟಕ ಪಶುವೈದ್ಯಕೀಯ ಮಂಡಳಿ, ಬೆಂಗಳೂರು.
12. ಆಯುಕ್ತರು, ಶಿಕ್ಷಣ ಇಲಾಖೆ, ಬೆಂಗಳೂರು.
13. ಆಯುಕ್ತರು, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
14. ನಿರ್ದೇಶಕರು, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
15. ಎಲ್ಲಾ ನಾಮನಿರ್ದೇಶಿತ ಸದಸ್ಯರುಗಳಿಗೆ (ಆಯುಕ್ತರ ಮೂಲಕ)
16. ಪತ್ರಿಕಾ ಪ್ರಕಟಣೆ (ನಿರ್ದೇಶಕರ ಮೂಲಕ)
17. ಹೆಚ್ಚುವರಿ ಪ್ರತಿ / ಶಾಖಾ ರಕ್ಷಕಡತ